ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ರೂ. 3.09 ಕೋಟಿ ಅಂದಾಜು ವೆಚ್ಚದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಅಳವಡಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ, ಟೆಂಡರ್ ಕರೆಯಲಾಗಿದೆ.

ಆ) ರೂ. 1.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಇ) ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, 5 ತಿಂಗಳ ಅವಧಿ ಅಗತ್ಯವಿರುತ್ತದೆ.

ಈ) ಇಲ್ಲ.

ಉ) ಯಾವುದೇ ಕಾರ್ಯಕ್ರಮ ಇರುವುದಿಲ್ಲ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಿತಿ ಕೇಂದ್ರಗಳು

131 (175) ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಿತಿ ಕೇಂದ್ರಗಳು ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು); ಇದೊಂದು ಖಾಸಗಿ ಸಂಸ್ಥೆಯೇ ಅಥವಾ ಸರ್ಕಾರದ ಅಂಗ ಸಂಸ್ಥೆಯೇ;

ಆ) ಈ ಕೇಂದ್ರದ ನಿರ್ವಹಣೆಯನ್ನು ಯಾವ ಇಲಾಖೆ ನಡೆಸುತ್ತಿದೆ; (ಇದರ ಬೈಲಾ ನಕಲು ನೀಡುವುದು)

ಇ) ಪಿಡಬ್ಲ್ಯೂಡಿ, ಜಿಲ್ಲಾ ಪಂಚಾಯ್ತಿ ಇಂಜಿನಿಯರ್ ವಿಭಾಗಗಳು ಇದ್ದರೂ ಸರ್ಕಾರ ಈ ರೀತಿಯ ನಿರ್ಮಿತಿ ಕೇಂದ್ರವನ್ನು ಯಾವ ಕಾರಣಕ್ಕಾಗಿ ತೆರೆಯಲಾಗಿದೆ ; (ಪೂರ್ಣ ವಿವರ ನೀಡುವುದು)

ಈ) ನಿರ್ಮಿತಿ ಕೇಂದ್ರಕ್ಕೆ ಟೆಂಡರ್ ಕರೆಯದೆ ಕಮೀಷನ್ ಆಧಾರದಲ್ಲಿ ಕಾಮಗಾರಿಗಳನ್ನು ನೀಡಲು ಕಾರಣವೇನು ; (ವಿವರ ನೀಡುವುದು)

ಉ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರಕ್ಕೆ ಯಾವ ಯಾವ ಕಾಮಗಾರಿಗಳನ್ನು ನೀಡಲಾಗಿದೆ; (ವಾರ್ಷಿಕವಾರು ಪೂರ್ಣ ವಿವರ ನೀಡುವುದು)

ಊ) ಕಳೆದ 3 ವರ್ಷಗಳಿಂದ ನಿರ್ಮಿಸಿದ ಕಾಮಗಾರಿಗಳಿಂದ ಪಡೆದ ಕಮೀಷನ್ ಎಷ್ಟು ಯಾವ ಖಾತೆಗೆ ಜಮಾ ಮಾಡಲಾಗುತ್ತಿದೆ; ಯಾವ ಯಾವ ಬಾಬ್ತುಗಳಿಗೆ ಈ ಕಮೀಷನ್ ವೆಚ್ಚ ಮಾಡಲಾಗಿದೆ; (ಆಯವ್ಯಯಗಳ ವಿವರ ನೀಡುವುದು)

ಋ) ನಿರ್ಮಿತಿ ಕೇಂದ್ರದಲ್ಲಿರುವ ನೌಕರರ ಸಂಖ್ಯೆ ಎಷ್ಟು; ಪ್ರತಿ ನೌಕರರಿಗೆ ನೀಡುತ್ತಿರುವ ಸಂಬಳ, ಭತ್ಯೆ ಎಷ್ಟು; ಇವರಿಗೆ ಪ್ರಾವಿಡೆಂಟ್ ಫಂಡ್ ಮತ್ತು ಇಎಸ್‌ಐ ಕಟ್ಟಲಾಗುತ್ತಿದೆಯೇ; (3 ವರ್ಷಗಳ ವಿವರ ನೀಡುವುದು)

ಎ) ಈ ನಿರ್ಮಿತಿ ಕೇಂದ್ರಗಳಲ್ಲಿರುವ ವಿವಿಧ ಕಾಮಗಾರಿಗಳಿಗೆ ಬೇಕಾಗುವ ಮೂಲಭೂತ ಸೌಕರ್ಯಗಳು ಯಾವುವು; (ಮಿಷನರಿ) ಎಲ್ಲೆಲ್ಲಿದೆ ಹಾಗೂ ಶಿವಮೊಗ್ಗ ಗ್ರಾಮಾಂತರ ಜಿಲ್ಲೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕಳೆದ 5 ವರ್ಷಗಳಿಂದ ನಿರ್ಮಿಸಲಾಗಿದೆ ; (ಪೂರ್ಣ ವಿವರ ನೀಡುವುದು)

ಏ) ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರ ನಿರ್ಮಿಸುತ್ತಿರುವ ಶಾಲಾ ಕಟ್ಟಡಗಳೆಷ್ಟು; ಅಂಗನವಾಡಿ ಕಟ್ಟಡಗಳೆಷ್ಟು; ಸುವರ್ಣ ಜಲಯೋಜನೆ ಶಾಲೆಗಳ ವಿವರ ನೀಡುವುದು; (ಕಾಮಗಾರಿ ಸ್ಥಳ, ಶಾಲೆ, ಅಂಗನವಾಡಿ ಕಟ್ಟಡಗಳ ವಿವರ, ಗ್ರಾಮ, ತಾಲ್ಲೂಕುವಾರು ವಿವರ ನೀಡುವುದು) ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಪ್ರಸ್ತುತ ರಾಜ್ಯದಲ್ಲಿ 32 ನಿರ್ಮಿತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ). ನಿರ್ಮಿತಿ ಕೇಂದ್ರಗಳು KSR Act 1960 ರಡಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ.

ಆ) ಪ್ರತಿಯೊಂದು ಜಿಲ್ಲೆಯಲ್ಲಿನ ನಿರ್ಮಿತಿ ಕೇಂದ್ರಗಳು KSR Act 1960 ರಡಿಯಲ್ಲಿ ನೊಂದಾಯಿಸಲ್ಪಟ್ಟಿರುತ್ತವೆ. ಆಯಾ ಜಿಲ್ಲೆಗಳ ನಿರ್ಮಿತಿ ಕೇಂದ್ರವು ಪ್ರತ್ಯೇಕವಾದ ಆಡಳಿತ ಮಂಡಳಿಯನ್ನು ಹೊಂದಿದ್ದು ಇದಕ್ಕೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಾರ್ಯಾಧ್ಯಕ್ಷರಾಗಿರುತ್ತಾರೆ. ಹಾಗೂ ಆಡಳಿತ ಮಂಡಳಿಯು ಇನ್ನಿತರೇ ಸದಸ್ಯರುಗಳನ್ನು ಹೊಂದಿರುತ್ತದೆ. ನಿರ್ಮಿತಿ ಕೇಂದ್ರದ ಸಿಬ್ಬಂದಿಗಳ ನೇಮಕಾತಿ, ಕಾರ್ಯ ಚಟುವಟಿಕೆಗಳನ್ನು ನಡೆಸಲು ಸಂಬಂಧಪಟ್ಟ ನಿರ್ಮಿತಿ ಕೇಂದ್ರದ ಆಡಳಿತ ಮಂಡಳಿಯ ವ್ಯಾಪ್ತಿಗೆ ಬರುತ್ತದೆ.

(ಭದ್ರಾವತಿ ನಿರ್ಮಿತಿ ಕೇಂದ್ರದ ಬೈಲಾ ನಕಲು ಪ್ರತಿಯನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ).

ಇ) ವಸತಿ ಹಾಗೂ ಕಟ್ಟಡ ನಿರ್ಮಾಣ ವೆಚ್ಚವು ದಿನೇ ದಿನೇ ಏರುತ್ತಿರುವುದನ್ನು ಮನಗಂಡು ರಾಜ್ಯ ಸರ್ಕಾರವು ನಿರ್ಮಾಣ ವೆಚ್ಚವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ದೇಶದ ವಿವಿಧೆಡೆಯಿರುವ ತಾಂತ್ರಿಕ ಸಂಶೋಧನಾ ಹಾಗೂ ಅಭಿವೃದ್ಧಿ ಸಂಸ್ಥೆಗಳಲ್ಲಿ ದೊರಕುವ ತಾಂತ್ರಿಕತೆಯನ್ನು ಆಯಾ ಸ್ಥಳಗಳ ಹವಾಮಾನಕ್ಕನುಗುಣವಾಗಿ ಸೂಕ್ತ ಮಾರ್ಪಾಡಿನೊಂದಿಗೆ ಅಳವಡಿಸಲು

1988ರಲ್ಲಿ ಕೇಂದ್ರ ಸರ್ಕಾರವು ನಿರ್ಣಯಿಸಿತು. ಅದರಂತೆ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ನಿರ್ಮಿತಿ ಕೇಂದ್ರಗಳನ್ನು ಸ್ಥಾಪಿಸಲು (ನಿರ್ಮಿತಿ ಕೇಂದ್ರಗಳ ಜಾಲ) ರಾಜ್ಯ ಸರ್ಕಾರಗಳು ಮುಂದಾಗಿ ಪ್ರಸ್ತಾವನೆ ಸಲ್ಲಿಸಲು ತಿಳಿಸಿತ್ತು. ಅಲ್ಲದೇ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ಪ್ರತಿಯೊಂದು ನಿರ್ಮಿತಿ ಕೇಂದ್ರಕ್ಕೆ ರೂ. 2.00 ಲಕ್ಷಗಳಂತೆ ಪ್ರಾರಂಭಿಕ ಅನುದಾನ ನೀಡುವುದಾಗಿಯೂ ತಿಳಿಸಿತ್ತು. ಇದರಂತೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ನೆರವಿನೊಂದಿಗೆ ಪ್ರತಿಯೊಂದು ಜಿಲ್ಲೆಗಳಲ್ಲಿ ನಿರ್ಮಿತಿ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

1. ರಾಜ್ಯದಲ್ಲಿ ಕ್ರಯ ಪರಿಣಾಮಕಾರಿ ತಾಂತ್ರಿಕತೆಯನ್ನು ವಸತಿ ಹಾಗೂ ಇತರೇ ಕಟ್ಟಡ ನಿರ್ಮಾಣ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ತರಬೇತಿ, ಸಂಶೋಧನೆಯ ವಿಸ್ತರಣೆ ಹಾಗೂ ಪ್ರಾತ್ಯಕ್ಷತೆಯ ಮೂಲಕ ಪ್ರಚುರಪಡಿಸುವುದು.

2. ವಸತಿ ಕ್ಷೇತ್ರದಲ್ಲಿ ನವೀನ ತಂತ್ರಜ್ಞಾನದ ಮಾಹಿತಿ ಸಂಗ್ರಹಣೆ.

3. ಕಾಲಕಾಲಕ್ಕೆ ಸರ್ಕಾರಕ್ಕೆ ಈ ಕ್ಷೇತ್ರದ ಅಭಿವೃದ್ಧಿ ಹಾಗೂ ನವೀನ ಮಾದರಿ ಅಳವಡಿಕೆಗಾಗಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡುವುದು.

4. ವಸತಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಅರೆ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದುವುದು ಹಾಗೂ ಅವುಗಳನ್ನು ನಿರ್ಮಿತಿ ಕೇಂದ್ರದ ಮೂಲಕ ಅಳವಡಿಸುವುದು.

5. ವಸತಿ ಹಾಗೂ ಇತರೇ ಕಟ್ಟಡ ನಿರ್ಮಾಣ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸರ್ಕಾರಿ, ಅರೆ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದುವುದು ಹಾಗೂ ಅವುಗಳಿಂದ ದೊರಕುವ ಉಪಯುಕ್ತ ಮಾಹಿತಿಗಳನ್ನು ಕ್ರೋಢೀಕರಿಸುವುದು ಹಾಗೂ ಅವುಗಳನ್ನು ಸರ್ಕಾರಿ, ಅರೆ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಸಲಹೆ ನೀಡುವುದು.

ಈ) ರಾಜ್ಯದಲ್ಲಿ ಕರ್ನಾಟಕ ಪಾರದರ್ಶಕತೆ ಕಾಯ್ದೆಯನ್ನು ಜಾರಿಗೆ ತಂದಿದ್ದು, ಈ ಆದೇಶದಂತೆ ಸರ್ಕಾರದ ಯಾವುದೇ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭಗಳಲ್ಲಿ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ವಿವರಗಳಲ್ಲಿರುವಂತೆ ಅಂದಾಜು ವೆಚ್ಚಗಳನ್ನು ತಯಾರಿಸಿ ಟೆಂಡರ್‌ಗಳನ್ನು ಕರೆಯಲಾಗುತ್ತಿದೆ. ಇದರಿಂದಾಗಿ ಪರಿಣಾಮಕಾರಿ ವೆಚ್ಚ ತಾಂತ್ರಿಕತೆಗಳನ್ನು ಮತ್ತು ಪರಿಸರಪ್ರೇಮಿ ತಾಂತ್ರಿಕತೆಗಳನ್ನು ಉಪಯೋಗಿಸುವ ಅವಕಾಶಗಳು ಕಡಿಮೆ ಆಗಿರುತ್ತದೆ. ಇದರಿಂದಾಗಿ ಕಟ್ಟಡ ಕಾಮಗಾರಿಗಳಲ್ಲಿ ಅಂದಾಜು ವೆಚ್ಚಕ್ಕಿಂತ

ಕಡಿಮೆ ಪೆಚ್ಚದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಮುಂದುವರಿದು ಕ್ರಯಪರಿಣಾಮಕಾರಿ ಹಾಗೂ ಪರಿಸರಪ್ರೇಮಿ ತಂತ್ರಜ್ಞಾನವನ್ನು ನಿರ್ಮಾಣ ಕಾರ್ಯಗಳಲ್ಲಿ ಅಳವಡಿಸಲು ಸಾಧ್ಯವಾಗುತ್ತಿರಲಿಲ್ಲ. ತಂತ್ರಜ್ಞಾನ ವರ್ಗಾವಣೆ, ನಿರ್ಮಾಣ ಕಾರ್ಯಗಳಲ್ಲಿ ಅಳವಡಿಸಲು ಸಾಧ್ಯವಾಗುತ್ತಿರಲಿಲ್ಲ. ತಂತ್ರಜ್ಞಾನವನ್ನು ನಿರ್ಮಾಣ ಕಾರ್ಯಗಳಲ್ಲಿ ಅಳವಡಿಸಲು ಸಾಧ್ಯವಾಗುತ್ತಿರಲಿಲ್ಲ. ತಂತ್ರಜ್ಞಾನ ವರ್ಗಾವಣೆ, ಪರಿಸರ ಪ್ರೇಮಿ, ಕ್ರಯಪರಿಣಾಮಕಾರಿ ತಂತ್ರಜ್ಞಾನವನ್ನು ಅಳವಡಿಸಿಕೊಂಡು ನಿರ್ಮಾಣ ಮಾಡುವ ಕಾಮಗಾರಿಗಳನ್ನು ಉತ್ತೇಜಿಸುವ ದೃಷ್ಟಿಯಿಂದ ನಿರ್ಮಿತಿ ಕೇಂದ್ರಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯಿಂದ ವಿನಾಯಿತಿ ನೀಡಲಾಗಿದೆ. ಆದ್ದರಿಂದ ಟೆಂಡರ್ ಕರೆಯದೇ ಕಾಮಗಾರಿಗಳನ್ನು ನೇರವಾಗಿ ವಹಿಸಲಾಗುತ್ತಿದೆ.

ಊ) ಕಳೆದ 03 ವರ್ಷಗಳಲ್ಲಿ ಭದ್ರಾವತಿ ನಿರ್ಮಿತಿ ಕೇಂದ್ರವು ನಿರ್ವಹಿಸಿದ ಕಾಮಗಾರಿಗಳನ್ನು ವಾರ್ಷಿಕವಾರು ವಿವರಗಳೊಂದಿಗೆ ಅನುಬಂಧ–3ರಲ್ಲಿ ಲಗತ್ತಿಸಿದೆ.

ಋ) ನಿರ್ಮಿತಿ ಕೇಂದ್ರಗಳು ಕಮಿಷನ್ ಆಧಾರದ ಮೇಲೆ ಕಾರ್ಯನಿರ್ವಹಿಸುವುದಿಲ್ಲ.

ಭದ್ರಾವತಿ ನಿರ್ಮಿತಿ ಕೇಂದ್ರದ ಆಯವ್ಯಯದ ವಿವರವನ್ನು (ಕಳೆದ 03 ಸಾಲಿನದ್ದು) ಅನುಬಂಧ–4ರಲ್ಲಿ ಲಗತ್ತಿಸಿದೆ.

ಋ) ಭದ್ರಾವತಿ ನಿರ್ಮಿತಿ ಕೇಂದ್ರದ ಸಿಬ್ಬಂದಿಗಳ ವಿವರಗಳನ್ನು (ಕಳೆದ 03 ವರ್ಷದ್ದು) ಅನುಬಂಧ–5ರಲ್ಲಿ ಲಗತ್ತಿಸಿದೆ.

ಎ) ಭದ್ರಾವತಿ ನಿರ್ಮಿತಿ ಕೇಂದ್ರದಲ್ಲಿರುವ ಮೂಲಭೂತ ಸೌಕರ್ಯಗಳ ವಿವರಗಳನ್ನು ಅನುಬಂಧ–6ರಲ್ಲಿ ಲಗತ್ತಿಸಿದೆ.

ಕಳೆದ 05 ವರ್ಷಗಳಿಂದ ಭದ್ರಾವತಿ ನಿರ್ಮಿತಿ ಕೇಂದ್ರವು ಶಿವಮೊಗ್ಗ ಗ್ರಾಮಾಂತರ ಜಿಲ್ಲೆಯಲ್ಲಿ ನಿರ್ವಹಿಸಿದ ಕಾಮಗಾರಿಗಳ ಪೂರ್ಣ ವಿವರಗಳನ್ನು ಅನುಬಂಧ–7ರಲ್ಲಿ ಲಗತ್ತಿಸಿದೆ.

ಏ) ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾವತಿ ನಿರ್ಮಿತಿ ಕೇಂದ್ರವು ನಿರ್ಮಿಸುತ್ತಿರುವ ಶಾಲಾ ಕಟ್ಟಡ, ಅಂಗನವಾಡಿ ಕಟ್ಟಡ ಹಾಗೂ ಸುವರ್ಣಜಲ ಯೋಜನೆಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ–8ರಲ್ಲಿ ಲಗತ್ತಿಸಿದೆ.